ಈ) ಚಾಮರಾಜನಗರದಂತಹ ತೀರ ಹಿಂದುಳಿದ ಜಿಲ್ಲೆಗೆ ಇಂತಹ ಮಾನದಂಡ ಅನುಸರಿಸುವುದರಿಂದ ಅಲ್ಲಿನ ಬಡವರಿಗೆ ನ್ಯಾಯ ಸಿಕ್ಕದಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಉ) ಎಷ್ಟು ಕಾಲಮಿತಿಯೊಳಗೆ ಪಡಿತರ ಕಾರ್ಡ್‌ಗಳನ್ನು ವಿತರಣೆ ಮಾಡಲಾಗುವುದು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಎಲ್ಲಾ ಅಹವಾಲುಗಳನ್ನು ಪೂರ್ಣ ಪ್ರಮಾಣದಲ್ಲಿ ವಿಲೇವಾರಿಗೊಳಿಸಿ ಕಾರ್ಯ ಕ್ರಮವನ್ನು ಪೂರೈಸಲಾಗುವುದು

ಆ) ಸಾರ್ವಜನಿಕರಿಂದ ನಿರೀಕ್ಷೆಗೂ ಮೀರಿ ಅಹವಾಲುಗಳು ಸ್ವೀಕೃತವಾದ್ದರಿಂದ ವಿಳಂಬವಾಗಿರುತ್ತದೆ

ಇ) ನೈಜ ಫಲಾನುಭವಿಗಳಿಗೆ ಅನ್ಯಾಯವಾಗದಂತೆ ಅರ್ಹರಿಗೆ ಪಡಿತರ ಚೀಟಿಯನ್ನು ವಿತರಿಸಲಾಗುವುದು

ಈ) ರಾಜ್ಯಾದ್ಯಂತ ಸಮೀಕ್ಷೆಯನ್ನು ಕೈಗೊಂಡು ವಿವಿಧ ವರ್ಗವಾರು ನೈಜ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿಯನ್ನು ವಿತರಿಸಲಾಗುವುದು

ಉ) ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ಖಾಯಂ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು, ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಪೂರೈಸಲು ಕನಿಷ್ಠ 6 ತಿಂಗಳ ಕಲಾವಕಾಶ ಬೇಕಿರುತ್ತದೆ

111 (430) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಇರುವ ಒಳನಾಡು / ಕರಾವಳಿ ಮೀನುಗಾರರಿಗೆ ನೀಡುತ್ತಿರುವ ಅನುದಾನವೆಷ್ಟು ಹಾಗೂ ಅವರ ಅಭಿವೃದ್ಧಿಗೆ ತೆಗೆದುಕೊಂಡಿರುವ ಕ್ರಮಗಳೇನು ,

ಆ) ಒಳನಾಡು ಮೀನುಗಾರರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಶೇಕಡವಾರು ಮೀನುಗಾರರ ಸಂಖ್ಯೆಯಲ್ಲಿ ಒಳನಾಡು ಮೀನುಗಾರರು ಹೆಚ್ಚಿನ ಸಂಖ್ಯೆಯಲ್ಲಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಈ) ಒಳನಾಡು ಮೀನುಗಾರರಿಗೆ ಮುಂದಿನ 2007–08ನೇ ಸಾಲಿನಲ್ಲಿದ್ದರೂ ಹೆಚ್ಚಿನ ಅನುದಾನ ಒದಗಿಸಿ ಮೀನುಗಾರರ ಅಭಿವೃದ್ಧಿಯನ್ನು ಮಾಡಲಾಗುವುದೇ ,

ಉ) ಈ ಸಾಲಿನಲ್ಲಿ ತಾಲ್ಲೂಕಿನ 10 ಮೀನುಗಾರರಿಗೆ ಮಾತ್ರ ಮನೆ ನಿರ್ಮಿಸಲು ಗುರಿ ಇರುವುದರಿಂದ, ಇನ್ನು ಎಷ್ಟು ವರ್ಷಗಳಲ್ಲಿ ವಸತಿರಹಿತರಿಗೆ ಮನೆ ನೀಡಲು ಕಾಲಮಿತಿ ಬೇಕಾಗಿರುವುದೆಷ್ಟು (ಮಾಹಿತಿ ನೀಡುವುದು) ,

ಊ) ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದ ಕ್ರಮವೇನು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಮೀನುಗಾರಿಕೆಗೆ 2006–07ನೇ ಸಾಲಿನಲ್ಲಿ ಒಟ್ಟು ರೂ 3613 53 ಲಕ್ಷಗಳ ಅನುದಾನ ಒದಗಿಸಲಾಗಿದ್ದು ಇದರಲ್ಲಿ ಕರಾವಳಿ ಮೀನುಗಾರಿಕೆಗೆ ರೂ 1016 18 ಲಕ್ಷಗಳು, ಒಳನಾಡು ಮೀನುಗಾರಿಕೆಗೆ ರೂ 685 48 ಲಕ್ಷಗಳು ಮತ್ಸಾಶ್ರಯ ಇತ್ಯಾದಿ ಸಾಮಾನ್ಯ ಯೋಜನೆಗಳಿಗೆ ರೂ 1911 87 ಲಕ್ಷಗಳ ಅನುದಾನ ಒದಗಿಸಲಾಗಿದೆ ಮೀನುಗಾರಿಕೆ ಪ್ರೋತ್ಸಾಹಕ್ಕಾಗಿ ಮೀನುಗಾರಿಕೆ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ

1 ಕರಾವಳಿ ಮೀನುಗಾರಿಕೆ

ಯಾಂತ್ರೀಕೃತ ದೋಣಿಗಳು ಬಳಸುವ 70,000 ಕಿ ಲೀ ರಾಜ್ಯ ಮಾರಾಟಕರ ರಹಿತ ಡೀಸೆಲ್ ಸರಬರಾಜು

ಕೇಂದ್ರ ವಲಯ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು ಉಪಯೋಗಿಸುವ ಇಂಧನದ ಮೇಲೆ ಕೇಂದ್ರ ಅಬ್ಕಾರಿ ಶುಲ್ಕ ರಿಯಾಯಿತಿ

ಕೇಂದ್ರ ಪುರಸ್ಕೃತ – ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳ ಯಾಂತ್ರಿಕರಣ

ನಾಡ ದೋಣಿಗಳಿಗೆ ಪಡಿತರ ಸೀಮೆಎಣ್ಣೆಯನ್ನು ಒದಗಿಸುವುದು

ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನಿರ್ಮಾಣ ಮತ್ತು ನಿರ್ವಹಣೆ

ಮೀನುಗಾರಿಕೆ ದೋಣಿಗಳಲ್ಲಿ ಜೀವರಕ್ಷಕ ಸಾಧನೆಗಳನ್ನು ಅಳವಡಿಸಲು ಸಹಾಯ, ದೂರ ತೀರದ ದೋಣಿಗಳಿಗೆ ಫಿಶ್ ಫೈಂಡರ್, ಜಿಪಿಎಸ್ ಇತ್ಯಾದಿ ಅಳವಡಿಸಲು ಸಹಾಯ, ಕೊಂಡಿರಸ್ತೆ ನಿರ್ಮಾಣ ಹಾಗೂ ಸೀರ್ಯಾಂಚಿಂಗ್

ಕೇಂದ್ರ ಪುರಸ್ಕೃತ ಹಿನ್ನೀರು ಜಲಕೃಷಿ ಅಭಿವೃದ್ಧಿಗಾಗಿ ಸೀಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಗಳಿಗೆ ಸಹಾಯ

2 ಒಳನಾಡು ಮೀನುಗಾರಿಕೆ

ರಾಜ್ಯದಲ್ಲಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿವಿಧ ಸಂಘ/ಸಂಸ್ಥೆಗಳಿಗೆ ಕಡಿಮೆ ಮೊತ್ತಕ್ಕೆ ಗುತ್ತಿಗೆ ನೀಡುವುದು ಅಥವಾ ಟೆಂಡರ್–ಕಂ–ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿ ಪಡಿಸುವುದು

ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಯೋಜನೆಯಡಿ

ಖಾಸಗಿ ಕ್ಷೇತ್ರದಲ್ಲಿ ಮೀನು ಕೊಳ ನಿರ್ಮಾಣಕ್ಕೆ ಸಹಾಯಧನ

ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಕೊಳ್ಳಲು ಸಹಾಯಧನ

ಹುಲ್ಲುಗೆಂಡೆ ಮೀನು ಮರಿ ಸರಬರಾಜಿಗೆ ಸಹಾಯಧನ

ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯಧನ

ಸಿಹಿನೀರು ಸೀಗಡಿ ಕೃಷಿಗೆ ಸಹಾಯಧನ

ಕೇಂದ್ರ ಪುರಸ್ಕೃತ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಒಳನಾಡು ಮೀನುಗಾರಿಕೆಯ ಅಭಿವೃದ್ಧಿ

ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ

ಕೇಂದ್ರ ಪುರಸ್ಕೃತ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಮತ್ತು ಜಲಕೃಷಿ ಯೋಜನೆ

3 ಇತರೆ ಸಾಮಾನ್ಯ ಯೋಜನೆಗಳು

ಕೇಂದ್ರ ಪುರಸ್ಕೃತ ಮೀನುಗಾರರ ಉಳಿತಾಯ ಪರಿಹಾರ ಯೋಜನೆ, ಮನೆಗಳ ನಿರ್ಮಾಣ ಹಾಗೂ ಸಾಮೂಹಿಕ ವಿಮಾ ಯೋಜನೆ

ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ

ಮೀನುಗಾರಿಕೆ ಸಾಮಾಗ್ರಿಗಳನ್ನು ಖರೀದಿಸಲು ಸಹಾಯ

ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ಸಹಾಯ

ಮೀನುಗಾರಿಕೆ ಸಹಕಾರ ಸಂಘಗಳಿಗೆ ಬಂಡವಾಳ ಹೂಡಲು ಸಹಾಯ, ವ್ಯವಸ್ಥಾಪನಾ ಸಹಾಯ

ಮಹಿಳಾ ಮೀನುಗಾರರಿಗೆ "ಮತ್ಸ್ಯ ಮಹಿಳಾ ಸ್ವಾವಲಂಬನಾ" ಯೋಜನೆ

ಮತ್ಸ್ಯಾಶ್ರಯ ಯೋಜನೆ

ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಮೀನುಗಾರರಿಗೆ ಪರಿಹಾರ ನೀಡುವುದು

ಆ) ಒಳನಾಡು ಮೀನುಗಾರರ ಬೇಡಿಕೆ ಹಾಗೂ ಅನುದಾನ ಲಭ್ಯತೆಗೆ ಅನುಗುಣವಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅನುಷ್ಠಾನಗೊಳಿಸಲಾಗುತ್ತಿದೆ

ಇ) ಹೌದು ತಿಳಿದಿದೆ

ಈ) ಒಳನಾಡು ಮೀನುಗಾರಿಕೆಗೆ 2007–08ನೇ ಸಾಲಿನಿಂದ ಹೆಚ್ಚು ಪ್ರಮುಖ್ಯತೆಯನ್ನು ನೀಡಿ, ಕೇಂದ್ರ ಸರ್ಕಾರದ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ಇವರ ಧನ ಸಹಾಯದಿಂದ ಜಲಾಶಯ ಅಭಿವೃದ್ಧಿಯನ್ನು ಹಾಗೂ ಒಳನಾಡು ಜಲಸಂಪನ್ಮೂಲದ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು

ಉ) ಪ್ರಸಕ್ತ ಸಾಲಿನಲ್ಲಿ ಮಂಜೂರಾದ 2660 ಮನೆಗಳಲ್ಲಿ ತಲಾ 10 ಮನೆಗಳನ್ನು ಕೊಳ್ಳೇಗಾಲ ಮತ್ತು ಹಾನೂರು ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗಿದೆ ಇದುವರೆವಿಗೂ ಸದರಿ ಯೋಜನೆಯಲ್ಲಿ ಕೊಳ್ಳೆಗಾಲ ತಾಲ್ಲೂಕಿಗೆ 580 ಮನೆಗಳನ್ನು ಮಂಜೂರು ಮಾಡಲಾಗಿದೆ ಕಾಲಕಾಲಕ್ಕೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಆಧರಿಸಿ ಮನೆಗಳನ್ನು ಮಂಜೂರು ಮಾಡಲಾಗುವುದು ಆದಾಗ್ಯೂ ಇನ್ನು ಐದು ವರ್ಷಗಳಲ್ಲಿ ಪ್ರಸಕ್ತ ಇರುವ ಬೇಡಿಕೆಯನ್ನು ಪೂರೈಸಲು ಕಾಲಮಿತಿ ನಿಗಧಿಪಡಿಸಲಾಗಿದೆ

ಊ) ಮೀನುಗಾರರಿಂದ ಮನೆಗಳಿಗೆ ಇರುವ ಬೇಡಿಕೆಯನ್ನು ಪೂರೈಸಲು ಕಾಲಕಾಲಕ್ಕೆ ಅಗತ್ಯ ಅನುದಾನ ಒದಗಿಸಲು ಕ್ರಮ ವಹಿಸಲಾಗುವುದು